SEVA BHARATHI

सेवा ही परमो धर्मः

ಸಂಚಿಕೆ : 06
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ

(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)

ಮಾಸಿಕ e-ನ್ಯೂಸ್ ಲೆಟರ್ – ಜೂನ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ತರೀಕೆರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ 20ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ

## ಕಲ್ಪತರು ನರ್ಸಿಂಗ್ ಸ್ಕೂಲಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ

## ಸೇವಾಭಾರತಿಯಿಂದ ಸ್ಕೂಲ್‌ಕಿಟ್ ವಿತರಣೆ

## ಸೇವಾಭಾರತಿ: ಸಂಪನ್ನಗೊಂಡ ಉಚಿತ 7 ದಿನಗಳ ಯೋಗ ಶಿಬಿರ

## ಉಡುಪಿಯ ಭಾರತ್ ವಿಕಾಸ ಪರಿಷತ್‌ನಲ್ಲಿ ಬೆನ್ನುಹುರಿ ಅಪಘಾತ ಮಾಹಿತಿ ಕಾರ್ಯಾಗಾರ

## ಕನ್ಯಾಡಿಯಲ್ಲಿ ಮಹಿಳೆಯರಿಗಾಗಿ ಉಚಿತ ಟೈಲರಿಂಗ್ ಹಾಗೂ ಯೋಗ ತರಬೇತಿ ಶಿಬಿರ

## ಸೇವಾಧಾಮ ವಿಡಿಯೋ ಡಾಕ್ಯುಮೆಂಟೇಷನ್ ಮಾಡಿದ ಕ್ಷಮಾ ಭಾರದ್ವಾಜ್ ಕಿರು ಪರಿಚಯ

## ಪುಂಜಾಲಕಟ್ಟೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮಾಹಿತಿ ಕಾರ್ಯಾಗಾರ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನಿಗೆ ಉದ್ಯೋಗಕ್ಕೆ ಬೆನ್ನೆಲುಬಾದ ಹೈನುಗಾರಿಕೆ ಕೃಷಿ

ಯಶೋಗಾಥೆ

## ನಮ್ಮಿಂದಿಷ್ಟು

ನಮ್ಮ ಯೋಜನೆಯಂತೆ ಸೇವಾ ಕಾರ್ಯಗಳು ಒಂದರ ಹಿಂದೊಂದರಂತೆ ನಡೆಯುತ್ತಲೇ ನಮ್ಮೂರು ಕನ್ಯಾಡಿ ಮತ್ತು ಉಜಿರೆಯ ಮಧ್ಯೆ ಒಂದು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಬಗ್ಗೆ ಈ ವರ್ಷ ಸ್ವಲ್ಪ ಗಮನ ಕೊಟ್ಟೆವು. ಈ ಕಾರಣದಿಂದ ಅಲ್ಲಿನ 11 ವಿದ್ಯಾರ್ಥಿಗಳಿಗೆ ಕೊಡೆ, ಬ್ಯಾಗ್, ಪುಸ್ತಕ, ಲೇಖನ ಸಾಮಾಗ್ರಿಗಳನ್ನು ಒದಗಿಸಿದ್ದೇವೆ.

ಕೊರೊನಾ ಕಾರಣಗಳಿಂದ ಶ್ರೀ ದುರ್ಗಾ ಮಾತೃಮಂಡಳಿಯ ಆಶ್ರಯದಲ್ಲಿ ನಡೆಯುತ್ತಿದ್ದ ಮಹಿಳೆಯರಿಗಾಗಿ ಉಚಿತ ಟೈಲರಿಂಗ್ ಶಿಬಿರಗಳನ್ನು ನಡೆಸಲು ಅಸಾಧ್ಯವಾಗಿತ್ತು. ಈ ತಿಂಗಳಲ್ಲಿ ನಮ್ಮ ಕಾರ್ಯಾಲಯ ಸೇವಾನಿಕೇತನದಲ್ಲಿ ಉಚಿತ ಟೈಲರಿಂಗ್ ಹಾಗೂ ಯೋಗ ಶಿಬಿರ ಪ್ರಾರಂಭಗೊಂಡಿದೆ. ಶಿಬಿರಾರ್ಥಿಗಳ ಸಂಖ್ಯೆಯೂ ಗಮನಾರ್ಹವಾಗಿದೆ. ಜೂನ್ 21 ರಂದು ಇದರ ಉದ್ಘಾಟನೆಯ ಶುಭ ಸಂದರ್ಭದಲ್ಲಿ ವಿಶ್ವ ಯೋಗ ದಿನದ ಆಚರಣೆಯೂ ನಡೆಯಿತು. ಆ ನಂತರ ಒಂದು ವಾರದ ಯೋಗಾಭ್ಯಾಸವೂ ಯಶಸ್ವಿಯಾಯಿತು.

ಪುಂಜಾಲಕಟ್ಟೆ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹಾಗೂ ಉಡುಪಿಯ ಭಾರತೀಯ ವಿಕಾಸ ಪರಿಷದ್‌ನ ಸದಸ್ಯರಾಗಿ ಬೆನ್ನುಹುರಿ ಅಪಘಾತ ನಿರ್ವಹಣೆ ಮತ್ತು ತಡೆಗಟ್ಟುವಿಕೆ ಬಗ್ಗೆ ಅರಿವು ಕಾರ್ಯಕ್ರಮ ಜರುಗಿತು. 2 ಕಾರ್ಯಕ್ರಮವೂ ಸಾಮಾಜಿಕ ಅರಿವು ಮೂಡಿಸಲು ಸಾಧ್ಯವಾಗಿಸಿದೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 2 ದಿನಗಳ ಆರೋಗ್ಯ ತಪಾಸಣೆ, ಮಾಹಿತಿ ಶಿಬಿರವು ಫಲಪ್ರದವಾಗಿ ಸಂಪನ್ನಗೊಂಡಿತು. ಈ ಶಿಬಿರಕ್ಕೆ ಸರ್ವ ತಯಾರಿ ಮಾಡಿಕೊಟ್ಟು, ಅನೇಕ ಸಂಘ-ಸಂಸ್ಥೆಗಳನ್ನು ಈ ಕಾರ್ಯಗಳಲ್ಲಿ ಭಾಗವಹಿಸುವಂತೆ ಆಸಕ್ತಿ ತೋರಿದ ಆಡಳಿತ ವೈದ್ಯಾಧಿಕಾರಿ ಡಾ। ದೇವರಾಜ್‌ರನ್ನು ನಾವೆಲ್ಲರೂ ಪ್ರಶಂಸಿಸಿ ಅಭಿನಂದಿಸಲೇಬೇಕಿದೆ. ಎರಡೂ ದಿನಗಳಲ್ಲಿ ಸ್ವತಃ ಮೇಲ್ವಿಚಾರಣೆ ಮಾಡುತ್ತಾ ದಿವ್ಯಾಂಗರಿಗೆ ಸಲಹೆ ಹಾಗೂ ಪ್ರೇರಣೆ ಕೊಡುತ್ತಾ ವೃತ್ತಿಗೌರವವನ್ನು ತೋರಿಸಿರುವ ವೈದ್ಯರಿಗೆ ನಾವೆಲ್ಲರೂ ಋಣಿಗಳು. ಅಂತಹ ಸಾಮಾಜಿಕ ಕಳಕಳಿಯುಳ್ಳ ವೈದ್ಯರು ಪ್ರತಿ ಆರೋಗ್ಯ ಕೇಂದ್ರಗಳಲ್ಲಿ ಸಿಗುವಂತಾಗಲಿ ಎಂಬುದು ನಮ್ಮ ಆಶಯ.

ಸೇವಾ ಹಿ ಪರಮೋ ಧರ್ಮಃ

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ-॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫೆರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ತರೀಕೆರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ 20ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ



**ತರೀಕೆರೆ (ಜೂ.27) :** ಸೇವಾಭಾರತಿ–ಸೇವಾಧಾಮ ಇದರ ಆಶ್ರಯದಲ್ಲಿ ತರೀಕೆರೆ ರೋಟರಿ ಕ್ಲಬ್ ಮತ್ತು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಇವರ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ 20ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಜೂನ್ 27 ರಂದು ತರೀಕೆರೆಯ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಪ್ರಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ಕಾರ್ಯ ಚಟುವಟಿಕೆಯ ಬಗ್ಗೆ ಸಂಕ್ಷಿಪ್ತವಾಗಿ ಕಾರ್ಯಕ್ರಮ ಸಂಯೋಜಕರಾದ ಶ್ರೀ ಆಶ್ರಿತ್ ಸಿ.ಪಿ. ವಿವರಿಸಿದರು. ಕಾರ್ಯಕ್ರಮವನ್ನು ತರೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ಚಂದ್ರಶೇಖರ್ ಬಿ.ಜೆ. ಉದ್ಘಾಟಿಸಿ ಸೇವಾಭಾರತಿಯು ಅತ್ಯುತ್ತಮ ಸೇವೆಯನ್ನು ಮಾಡುತ್ತಿದ್ದು ಸಂಸ್ಥೆಯ ಈ ಸೇವೆಗೆ ಕೃತಜ್ಞತೆಯನ್ನು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ತರೀಕೆರೆ ರೋಟರಿಕ್ಲಬ್ ಅಧ್ಯಕ್ಷರಾದ ರೊ| ದಯಾನಂದ ಎಚ್.ಓ. ಕಾರ್ಯಕ್ರಮವನ್ನುದ್ದೇಶಿಸಿ ಮಾತಾಡಿದರು. ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಯಾದ ಶ್ರೀ ಪೃಥ್ವಿಜಿತ್ ಕಾರ್ಯಕ್ರಮಕ್ಕೆ ಶುಭಹಾರೈಸುದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ತರೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ತಾಲ್ಲೂಕು ಆಡಳಿತ ವೈಧ್ಯಾಧಿಕಾರಿಗಳಾದ ಡಾ. ದೇವರಾಜ್ ಟಿ.ಎಂ. ಮಾತನಾಡಿ, ದಿವ್ಯಾಂಗರು ಸಂಘಗಳನ್ನು ಕಟ್ಟಿಸೇವಾಭಾರತಿಯಂತಹ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ಇತರರಿಗೆ ಜಾಗೃತಿ ಕಾರ್ಯಕ್ರಮ ಹಾಗೂ ಬೆನ್ನುಹುರಿ ಅಪಘಾತದ ವಿಷಯಗಳ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಗಳನ್ನು ಮಾಡಬೇಕೆಂದು ಪ್ರೇರಣಾತ್ಮಕ ಮಾತುಗಳನ್ನು ಹೇಳಿದರು.

ತರೀಕೆರೆ ರೋಟರಿ ಕ್ಲಬ್‌ನ ಕಾರ್ಯದರ್ಶಿ ರೊ| ಶಶಿಕುಮಾರ್ ಪಿ. ವೇದಿಕೆಯಲ್ಲಿ ಉಪಸ್ಥಿತ ರಿದ್ದರು. ಕಾರ್ಯಕ್ರಮದಲ್ಲಿ ದಕ್ಷಿಣಕನ್ನಡದ ಹಿರಿಯ ಕ್ಷೇತ್ರ ಸಂಯೋಜಕರು ಶ್ರೀ ಮನು ಆರ್. ಉಡುಪಿ ಕ್ಷೇತ್ರ ಸಂಯೋಜಕರಾದ ಶ್ರೀ ಶಶಾಂತ್, ಸೇವಾ ಸಂಯೋಜಕರಾದ ಶ್ರೀ ಪಾಯಪ್ಪ ಜೈನ್ ಉಪಸ್ಥಿರಿದ್ದರು.

ಒಟ್ಟು 7 ಮಂದಿ ಫಲಾನುಭವಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿ ಡಾಕ್ಯುಮೆಂಟೇಷನ್ ಸಂಯೋಜಕಿ ಅಪೂರ್ವ ಪಿ.ವಿ. ನಿರೂಪಿಸಿದರು. ಐ.ಸಿ.ಟಿ.ಸಿ.ಪ್ರ.ಶಾ. ತಂತ್ರಜ್ಞರಾದ ಶ್ರೀ ಓಂಕಾರಮೂರ್ತಿ ಸ್ವಾಗತಿಸಿ, ಧನ್ಯವಾದವಿತ್ತರು.

## ಕಲ್ಪತರು ನರ್ಸಿಂಗ್ ಸ್ಕೂಲಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ



**ಬೆಳ್ತಂಗಡಿ( ಜೂ.09):** ಸೇವಾಭಾರತಿ –ಸೇವಾಧಾಮದ ವತಿಯಿಂದ ಬೆಳ್ತಂಗಡಿಯ ಕಲ್ಪತರು ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಜಿ.ಎನ್.ಎಂ. ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜೂನ್ 9 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು. ಆರ್ ಇವರು ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರು ಚಂದ್ರಿಕಾ ಹಾಗೂ ಅಧ್ಯಾಪಕವೃಂದ, ಸೇವಾಭಾರತಿಯ ಖಜಾಂಚಿ ಕೆ. ವಿನಾಯಕರಾವ್, ಕಾರ್ಯಕ್ರಮ ಸಂಯೋಜಕರಾದ ಆಶ್ರಿತ್ ಸಿ.ಪಿ. ಉಪಸ್ಥಿತರಿದ್ದರು. ಒಟ್ಟು 77 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದದ್ದರು.

## ಸೇವಾಭಾರತಿಯಿಂದ ಸ್ಕೂಲ್‌ಕಿಟ್ ವಿತರಣೆ



**ಕನ್ಯಾಡಿ (ಜೂ.13) :** ಸೇವಾಭಾರತಿ ಕನ್ಯಾಡಿ ವತಿಯಿಂದ ಸಿದ್ದವನ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾಬ್ಯಾಗ್, ಛತ್ರಿ, ಪುಸ್ತಕ, ಮತ್ತಿತರ ಲೇಖನಸಾಮಗ್ರಿಗಳನ್ನು ಜೂನ್ 13ರಂದು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಮಾತನಾಡಿ, ಸರಕಾರಿ ಶಾಲಾ ವಾತಾವರಣದ ಕಲಿಕೆಯಿಂದ ಮಕ್ಕಳಿಗೆ ದೊರೆಯುವ ಪ್ರಯೋಜನದ ಬಗ್ಗೆ ತಿಳಿಸಿ, ಸ್ಕೂಲ್‌ಕಿಟ್ ವಿತರಿಸಿದರು. ಉಜಿರೆ ವಿಭಾಗದ ಸಮೂಹ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಪ್ರತಿಮಾ ಕೆ.ಎಂ. ಸರಕಾರಿ ಶಾಲೆಯ ಪ್ರಾಮುಖ್ಯತೆಯನ್ನು ತಿಳಿಸಿದರು. ಸಿದ್ದವನ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುಜಾತ ರೈ, ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ವಿಶ್ವನಾಥ್, ಸೇವಾಭಾರತಿ ಸಂಸ್ಥೆಯ ಸ್ವಯಂಸೇವಕರಾದ ಶ್ರೀ ಚಂದನ್ ಗುಡಿಗಾರ್, ಸೀನಿಯರ್ ಮ್ಯಾನೇಜರ್ ಚರಣ್‌ಕುಮಾರ್ ಎಂ., ಡಾಕ್ಯುಮೆಂಟೇಷನ್ ಸಂಯೋಜಕಿ ಕು. ಅಪೂರ್ವ ಪಿ.ವಿ. ಮತ್ತು ವಿದ್ಯಾರ್ಥಿಗಳ ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಒಟ್ಟು 11 ಮಂದಿ ಶಾಲಾಮಕ್ಕಳಿಗೆ ಸ್ಕೂಲ್‌ಕಿಟ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮವನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುಜಾತ ರೈ ನಿರೂಪಿಸಿ, ಸಹಶಿಕ್ಷಕಿ ಅರ್ಪಣ ವಂದಿಸಿದರು.

## ಜೂನ್ ತಿಂಗಳಲ್ಲಿ ದೇಣಿಗೆ ನೀಡಿದ ಸಂಘಸಂಸ್ಥೆಗಳು

ಎ.ಸಿ.ಇ. ಮ್ಯಾನುಫ್ಯಾಕ್ಚರಿಂಗ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು
ಶ್ರೀ ಮಾರಿಕಾಂಬಾ ದೇವಸ್ಥಾನ, ಶಿರಸಿ
ಭಾರತ ವಿಕಾಸ ಪರಿಷತ್, ಉಡುಪಿ

## ಮಹನೀಯ ದಾನಿಗಳು

ಮಾಸ್ಟರ್ ಸೋಹಂ ಉಡುಪ, ಧರ್ಮಸ್ಥಳ
ಶ್ರೀ ರಾಮಚಂದ್ರ ಭಟ್ ಕೆ, ಪುತ್ತೂರು
ಶ್ರೀಮತಿ. ಚಂದನ್ ಅಮಿತ್ ಚವಾಣ್, ಮುಂಬೈ
ಶ್ರೀ. ದಿನೇಶ್ ಸದಾಶಿವಂ, ಬೆಂಗಳೂರು
ಶ್ರೀಮತಿ ಅದಿತಿ ಕೇತನ್ ಪ್ರಧಾನ್, ಮುಂಬೈ
ಶ್ರೀ. ರಾಜೇಶ್, ಉಡುಪಿ
ಶ್ರೀಮತಿ ಪೂಜಾ ಬಿ.ವಿ, ಬೆಂಗಳೂರು
ಶ್ರೀ ಹೆಚ್. ತುಷಾರ್, ಮಂಗಳೂರು
ಬೇಬಿ ಆಧ್ಯಾ ಎ.
ಶ್ರೀ ಶೆಲ್ಡನ್ ಮೋನಿಸ್, ಬೆಳ್ತಂಗಡಿ
ಶ್ರೀಮತಿ ಪೂರ್ಣಿಮಾ ಕಿಣಿ, ದೊಂಡೋಲೆ
ಶ್ರೀ ಎಂ.ಎಲ್. ಪ್ರಕಾಶ್
ಶ್ರೀ ಸುಧೀರ್ ರಾವ್, ಮುಂಬೈ

## ಸೇವಾನಿಧಿ ದಾನಿಗಳು

ಶ್ರೀ ಶ್ರೀಧರ್ ಕೆ ವಿ, ಉಜಿರೆ
ಶ್ರೀ ಮದ್ವಮೂರ್ತಿ ಪಿ, ಉಡುಪಿ
ವೆಲ್ವೆಟ್ ಟ್ರಾವೆಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ಜಿ ವಿಜಯ ಗೌಡ, ಉಜಿರೆ
ಶ್ರೀಮತಿ ವಸಂತಿ ಗೌಡ, ಬೊಲ್ಮ
ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಛಾಯಾ ಸಿ. ಎಸ್, ಉಜಿರೆ
ಶ್ರೀಮತಿ ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀಮತಿ. ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಬಿ ಪುರಂದರ, ನಾರ್ಯ, ಧರ್ಮಸ್ಥಳ
ಶ್ರೀ ಪುರುಷೋತ್ತಮ ಡಿ. ಎ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ, ನೇತ್ರಾವತಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ರಾಮಕೃಷ್ಣ ಭಟ್ ಜಿ. ಎನ್, ಕನ್ಯಾಡಿ
ಶ್ರೀ ಅದ್ವೈತ್ ಪೈ, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ. ಡಿ., ವೇಣೂರು
ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ಚಿತ್ರೇಶ್ ಶೆಟ್ಟಿ, ಉಜಿರೆ

## ವಸ್ತುರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಕು. ಅಂಜನಾದೇವಿ, ಉಜಿರೆ
ಶ್ರೀ ರಜತ್ ರಾವ್, ಧರ್ಮಸ್ಥಳ

*Abled does not mean enabled. Disabled does not mean less abled*

## ಕನ್ಯಾಡಿಯಲ್ಲಿ ಮಹಿಳೆಯರಿಗಾಗಿ ಉಚಿತ ಟೈಲರಿಂಗ್ ಹಾಗೂ ಯೋಗ ತರಬೇತಿ ಶಿಬಿರ



**ಕನ್ಯಾಡಿ(ಜೂ.21):** ಸೇವಾಭಾರತಿ(ರಿ.), ಕನ್ಯಾಡಿ ಹಾಗೂ ಶ್ರೀ ದುರ್ಗಾ ಮಾತೃಮಂಡಳಿ ಕನ್ಯಾಡಿ ಇವುಗಳ ಸಹಯೋಗದಲ್ಲಿ 25ನೇ ಉಚಿತ ಟೈಲರಿಂಗ್ ತರಬೇತಿ ಮತ್ತು ಉಚಿತ ಯೋಗ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಜೂನ್ 21 ರಂದು ಸೇವಾಭಾರತಿಯ ಪ್ರಧಾನ ಕಚೇರಿ ಸೇವಾನಿಕೇತನ ಕನ್ಯಾಡಿಯಲ್ಲಿ ಜರುಗಿತು.

ಕಾರ್ಯಕ್ರಮವನ್ನು ಶ್ರೀದುರ್ಗಾ ಮಾತೃಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಶಾಂತ ಪಿ.ಶೆಟ್ಟಿ ಉದ್ಘಾಟಿಸಿ, ಮಹಿಳೆಯರ ಸ್ವ-ಉದ್ಯೋಗದ ಪ್ರಾಮುಖ್ಯತೆ, ತರಬೇತಿಯ ಸದುಪಯೋಗ ಹಾಗೂ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಟೈಲರಿಂಗ್ ತರಬೇತಿಯನ್ನು ನೀಡಲು 6 ಟೈಲರಿಂಗ್ ಮೆಷೀನ್‌ಗಳ ಅವಶ್ಯಕತೆ ಇದೆ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಸೇವಾಭಾರತಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್ ಕಾರ್ಯಕ್ರಮವನ್ನು ಉದ್ದೇಶಿಸಿ, ಸಂಸ್ಥೆಯು ಮಹಿಳಾ ಸಬಲೀಕರಣಕ್ಕಾಗಿ ನಿರಂತರ ಶ್ರಮಿಸುತ್ತಿದೆ. ಶಿಬಿರದ ಸದುಪಯೋಗವಾಗಲಿ ಎಂದು ಶುಭ ಹಾರೈಸಿದರು. ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಸುಮತಿ ಟೈಲರಿಂಗ್ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗಳಿಗೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಮಹಿಳಾ ಸಬಲೀಕರಣದ ಅಗತ್ಯತೆ, ಟೈಲರಿಂಗ್ ಉದ್ಯೋಗವಕಾಶ ಮತ್ತು ಯೋಗಾಭ್ಯಾಸದ ಪ್ರಯೋಜನಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀದುರ್ಗಾ ಮಾತೃಮಂಡಳಿಯ ಕಾರ್ಯದರ್ಶಿ ಶ್ರೀಮತಿ ಪೂರ್ಣಿಮಾ, ಖಜಾಂಚಿ ಶ್ರೀಮತಿ ಬಬಿತ, ಸೇವಾಭಾರತಿಯ ಮಹಿಳಾ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ವಸಂತಿಗೌಡ, ಶ್ರೀ ದುರ್ಗಾ ಮಾತೃಮಂಡಳಿಯ ಸದಸ್ಯರಾದ ಶ್ರೀಮತಿ ರವಿಜಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಒಟ್ಟು 30 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿಯ ಅಕೌಂಟೆಂಟ್ ಕು. ಅಕ್ಷತಾ ನಿರೂಪಿಸಿ, ಶ್ರೀದುರ್ಗಾ ಮಾತೃಮಂಡಳಿ ಕಾರ್ಯದರ್ಶಿ ಶ್ರೀಮತಿ ಪೂರ್ಣಿಮ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಷನ್ ಸಂಯೋಜಕಿ ಕು. ಅಪೂರ್ವಪಿ.ವಿ. ವಂದಿಸಿದರು.

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ






ಜೂನ್ ತಿಂಗಳ ಸೇವಾಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲವ್ಯಕ್ತಿಯಾಗಿ ಬೆಂಗಳೂರು, ಆದ್ಯ ಆಯುರ್ವೇದಾಲಯದ ಬಿ.ಎ.ಎಂ.ಎಸ್., ಎಂ.ಡಿ. ಡಾ. ಅರ್ಚನಾ ಕಜೆಕಾರ್‌ರವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಯುರ್ವೇದದಿಂದಾಗುವ ಪ್ರಯೋಜನಗಳ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 51 ಮಂದಿ ಭಾಗವಹಿಸಿದ್ದರು.

### ಜೂನ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 2 |
| 2. | ವಾಕರ್ ವಿತರಣೆ | – 3 |
| 3. | ಸೆಲ್ಫ್‌ಕೇರ್ ಕಿಟ್ | – 4 |
| 4. | ಮೆಡಿಕಲ್ ಕಿಟ್ | – 5 |
| 5. | ವಾಟರ್ ಬೆಡ್ | – 1 |

*The world worries about disability more than disabled people do*

# ಸೇವಾಭಾರತಿ: ಸಂಪನ್ನಗೊಂಡ ಉಚಿತ 7 ದಿನಗಳ ಯೋಗಶಿಬಿರ



**ಕನ್ಯಾಡಿ (ಜೂ.29):** ಸೇವಾಭಾರತಿ ಕನ್ಯಾಡಿ ಹಾಗೂ ಕನ್ಯಾಡಿಯ ಶ್ರೀ ದುರ್ಗಾ ಮಾತೃಮಂಡಳಿಗಳ ಸಹಯೋಗದಲ್ಲಿ ನಡೆದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭವು ಜೂನ್ 29ರಂದು ಕನ್ಯಾಡಿಯ ಸೇವಾನಿಕೇತನ ಕಾರ್ಯಾಲಯದಲ್ಲಿ ಜರುಗಿತು.

ಕಾರ್ಯಕ್ರಮದಲ್ಲಿ ಯೋಗ ತರಬೇತುದಾರರಾದ ಕು. ಭಾಷಿಣಿ ಯೋಗಾಭ್ಯಾಸದ ಉದ್ದೇಶ ಹಾಗೂ ಅಗತ್ಯತೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, 'ತಾನು ನಡೆಸಿದ ಶಿಬಿರಗಳಲ್ಲಿ ಇದೊಂದು ಅತ್ಯುತ್ತಮ ಅನುಭವ ನೀಡಿದ ಶಿಬಿರವಾಗಿದ್ದು ಇದಕ್ಕೆ ಅವಕಾಶ ಕೊಟ್ಟ ಸೇವಾಭಾರತಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಅವರಿಗೆ ಕೃತಜ್ಞತೆಯನ್ನು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಶ್ರೀ ದುರ್ಗಾ ಮಾತೃ ಮಂಡಳಿಯ ಅಧ್ಯಕ್ಷರು ಶ್ರೀಮತಿ ಶಾಂತ ಪಿ. ಶೆಟ್ಟಿ ಯೋಗ ಅಭ್ಯಾಸದ ಮಹತ್ವವನ್ನು ತಿಳಿಸಿದರು. ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ದುರ್ಗಾ ಮಾತೃಮಂಡಳಿಯ ಸದಸ್ಯರಾದ ಶ್ರೀಮತಿ ರವಿಜಾಸತೀಶ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಯೋಗ ತರಬೇತುದಾರರಾದ ಕು. ಭಾಷಿಣಿಯವರನ್ನು ಸೇವಾಭಾರತಿ ಹಾಗೂ ಶ್ರೀ ದುರ್ಗಾ ಮಾತೃಮಂಡಳಿ ಪರವಾಗಿ ಗೌರವಿಸಲಾಯಿತು. ಒಟ್ಟು 15 ಮಂದಿ ಶಿಬಿರಾರ್ಥಿಗಳು ಈ ಯೋಗ ಶಿಬಿರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿಯ ಡಾಕ್ಯು ಮೆಂಟೇಷನ್ ಸಂಯೋಜಕಿ ಕು. ಅಪೂರ್ವ ಪಿ.ವಿ. ನಿರೂಪಿಸಿ, ಅಕೌಂಟೆಂಟ್ ಕು.ಅಕ್ಷತ ಸ್ವಾಗತಿಸಿ, ಧನ್ಯವಾದವಿತ್ತರು.

## ಉಡುಪಿಯ ಭಾರತ್ ವಿಕಾಸ ಪರಿಷತ್‌ನಲ್ಲಿ ಬೆನ್ನುಹುರಿ ಅಪಘಾತ ಮಾಹಿತಿ ಕಾರ್ಯಾಗಾರ




**ಉಡುಪಿ(ಜೂ.24):** ಸೇವಾಭಾರತಿ – ಸೇವಾಧಾಮದ ವತಿಯಿಂದ ಭಾರ್ಗವ ಶಾಖೆ ಉಡುಪಿಯ ಭಾರತ್ ವಿಕಾಸ್ ಪರಿಷತ್ ಕಾರ್ಯಾಗಾರವನ್ನು ಜೂನ್ 24 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಖಜಾಂಚಿ ಶ್ರೀ ಕೆ. ವಿನಾಯಕ ರಾವ್‌ರವರು ಬೆನ್ನುಹುರಿ ಅಪಘಾತ ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕಾ ಕ್ರಮಗಳು ಮತ್ತು ಬೆನ್ನುಹುರಿ ಅಪಘಾತ ದಿವ್ಯಾಂಗರಿಗೆ ಪುನಶ್ಚೇತನದ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಉಡುಪಿ ಭಾರತ ವಿಕಾಸ ಪರಿಷತ್‌ನ ಅಧ್ಯಕ್ಷರಾದ ಶ್ರೀ ಕೃಷ್ಣಪ್ರಸಾದ್, ಕಾರ್ಯದರ್ಶಿ ಶ್ರೀ ಕೆ. ಸುಬ್ರಾಯ ಶೆಣೈ, ಸಂಚಾಲಕರು ಶ್ರೀ ಪಿ. ವಸಂತ ಭಟ್, ಸೇವಾಭಾರತಿಯ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್, ಉಡುಪಿ ಕ್ಷೇತ್ರ ಸಂಯೋಜಕರಾದ ಶ್ರೀ ಶಶಾಂತ್ ಉಪಸ್ಥಿತರಿದ್ದರು. ಒಟ್ಟು ಭಾರತ ವಿಕಾಸ ಪರಿಷತ್‌ನ 30 ಮಂದಿ ಸದಸ್ಯರು ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

## ಪುಂಜಾಲಕಟ್ಟೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮಾಹಿತಿ ಕಾರ್ಯಾಗಾರ



**ಬೆಳ್ತಂಗಡಿ : (ಜೂ.21)** ರಂದು ಸೇವಾಭಾರತಿ –ಸೇವಾಧಾಮದ ವತಿಯಿಂದ ಬೆಳ್ತಂಗಡಿಯ ಪುಂಜಾಲಕಟ್ಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜೂನ್ 21 ರಂದು ಆಯೋಜಿಸ ಲಾಯಿತು.

ಸೇವಾಭಾರತಿಯ ಖಜಾಂಚಿ ಶ್ರೀ ಕೆ. ವಿನಾಯಕ ರಾವ್‌ರವರು ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ.ಕೆ. ಶರತ್ ಕುಮಾರ್, ಆಂತರಿಕ ಗುಣಮಟ್ಟ ಭರವಸಾ ಕೋಶಸಂಚಾಲಕರು ಡಾ. ಲೋಕೇಶ್, ರೆಡ್‌ಕ್ರಾಸ್ ಸಂಚಾಲಕರು ಪ್ರೊ. ಶೇಖರ್, ರೋವರ್ ಮತ್ತು ರೆಂಜರ್ಸ್‌ನ ಸಂಚಾಲಕರು ಪ್ರೊ. ಆಂಜನೇಯ ಎಂ.ಎನ್. ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು ಆರ್., ಉಡುಪಿ ಕ್ಷೇತ್ರ ಸಂಯೋಜಕರಾದ ಶ್ರೀ ಶಶಾಂಕ್ ಉಪಸ್ಥಿತರಿದ್ದರು.

ಒಟ್ಟು 71 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಸೇವಾಧಾಮ ವಿಡಿಯೋ ಡಾಕ್ಯುಮೆಂಟೇಷನ್ ಮಾಡಿದ ಕ್ಷಮಾ ಭಾರದ್ವಾಜ್ ಕಿರು ಪರಿಚಯ




**ಕ್ಷಮಾ ಭಾರದ್ವಾಜ್** ಮೂಲತಃ ಉಜಿರೆಯಾಕೆ. ಪ್ರಸ್ತುತ ಬೆಂಗಳೂರಲ್ಲಿ ನೆಲೆಸಿದ್ದಾರೆ. ಪಬ್ಲಿಕ್ ಟಿ.ವಿ., ಕಸ್ತೂರಿ ನ್ಯೂಸ್ ಸೇರಿದಂತೆ ಮಾಧ್ಯಮ ಕ್ಷೇತ್ರದಲ್ಲಿ ಒಂಭತ್ತು ವರ್ಷಗಳ ಅನುಭವ ಹೊಂದಿದ್ದಾರೆ. ಕರ್ನಾಟಕ ಕಲೆ ಮತ್ತು ಮಾಧ್ಯಮ ಅಕಾಡೆಮಿಯಿಂದ ಅತ್ಯುತ್ತಮ ನಿರೂಪಕಿ ಪ್ರಶಸ್ತಿ ಕೂಡಾ ಗಳಿಸಿರುತ್ತಾರೆ. ಪ್ರಸ್ತುತ Surpriz gourmet chocolates ಕಂಪನಿಯ ಸಹಸಂಸ್ಥಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. Food and trip with Kshama ಹೆಸರಿನ ಯೂಟ್ಯೂಬ್ ವಾಹಿನಿಯನ್ನು ಇವರು ನಡೆಸುತ್ತಿದ್ದು ಸೇವಾಭಾರತಿ ಹಾಗೂ ಸೇವಾಧಾಮ ಸಂಸ್ಥೆಯ ಕುರಿತಾಗಿ ಒಂದು ವಿಡಿಯೋ ಡಾಕ್ಯುಮೆಂಟರಿಯನ್ನು ತಮ್ಮ ವಾಹಿನಿಯಲ್ಲಿ ಬಿತ್ತರಿಸಿದ್ದಾರೆ. ವಿಡಿಯೋ ವೀಕ್ಷಿಸಲು ಈ ಕೆಳಗಿನ ಯೂಟ್ಯೂಬ್ ಲಿಂಕನ್ನುಬಳಸಿ;

**ಬಾಳುಬರಡಾಯ್ತು, ಬದುಕೋದೇ ಬೇಡ ಅಂತಿದ್ದವರು ಇಂದು ನೂರಾರು ಜನರ ಪಾಲಿಗೆ ದೇವರಾಗ್ಬಿಟ್ರು! ಎಂಥಾ ಸಾರ್ಥಕ ಬದುಕು ಇವ್ರದ್ದು ಅಲ್ವಾ!!? ನೀವು ನೋಡ್ಲೇಬೇಕಾದ ರಿಯಲ್ ಭಗೀರಥನ ಕಥೆ! https://youtu.be/nMWT5W_vLKc**

**ಮಾನವೀಯತೆಯನ್ನೇ ಮರೀತಿರೋ ಕಾಲದಲ್ಲಿ ಈ ಆಪದ್ಬಾಂಧವ ದೇವರಂತೆ ಸಹಾಯಕ್ಕೆ ಬಂದ್ರು! ಬೆನ್ನುಹುರಿ ಅಪಘಾತಕ್ಕೊಳಗಾದ ಎಷ್ಟೋ ಜನರಿಗೆ ಮರುಜೀವನವನ್ನ ಕಟ್ಟಿಕೊಡ್ತಿರುವ ಹೆಮ್ಮೆಯ ಶ್ರೀ ವಿನಾಯಕ ರಾವ್ ಕನ್ಯಾಡಿಯವರು ಕಟ್ಟಿದ ಸಂಸ್ಥೆ ನಮ್ಮ ನಿಮ್ಮೆಲ್ಲರ ಕಣ್ಣು ತೆರೆಸುತ್ತೆ ನೋಡಿ!! https://youtu.be/HVeOkQ6pbi4**

## ಜೂನ್ ತಿಂಗಳಲ್ಲಿ ಗಾಲಿಕುರ್ಚಿ ವಿತರಣೆ





ಶ್ರೀ ದಯಾನಂದ್, ಸೋಮವಾರಪೇಟೆ । ಶ್ರೀ ಮಹೇಶ್, ತರೀಕೆರೆ

## ಜೂನ್ ತಿಂಗಳಲ್ಲಿ ಜೀವನೋಪಾಯಕ್ಕೆ ಸಹಾಯ



ಶ್ರೀ ಹೈದರಾಲಿ, ಸುರತ್ಕಲ್

## ಜೂನ್ ತಿಂಗಳಲ್ಲಿ ವಾಕರ್ ವಿತರಣೆ





ಶ್ರೀ ಮಂಜುನಾಥ ಮೂಡಿಗೆರೆ । ಶ್ರೀ ಲಿಂಗಪ್ಪ, ಸುಳ್ಯ

## ಜೂನ್ ತಿಂಗಳಲ್ಲಿ ಕ್ಯಾಲಿಪರ್‌ಗೆ ಸಹಾಯ



ಶ್ರೀ ಮಂಜುನಾಥ ಮೂಡಿಗೆರೆ

*Believe you can and you're halfway there*




## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...**




ಶ್ರೀಮತಿ ರಿಂಕ & ಶ್ರೀ ಬಾಲಕೃಷ್ಣ, ಕೊಕ್ಕಡ | ಶ್ರೀ ಕಿರಣ್‌ರಾಜ್ ಕೆ. ಬೆಳ್ತಂಗಡಿ




ಶ್ರೀಮತಿ ಚಂದನ ಅಮಿತ್, ಮುಂಬೈ | ಮಾಸ್ಟರ್ ಸೋಹಮ್, ಧರ್ಮಸ್ಥಳ




ಶ್ರೀ ಮನು. ಆರ್, ಧರ್ಮಸ್ಥಳ | ಕು. ಅಪೂರ್ವ ಪಿ.ವಿ, ಪುತ್ತೂರು




ಶ್ರೀ ಬಾಲಕೃಷ್ಣ, ಕೊಕ್ಕಡ | ಶ್ರೀ ತುಷಾರ್ ಹೆಚ್, ಮಂಗಳೂರು




ಶ್ರೀಮತಿ ಮಧುರಾಣಿ & ಶ್ರೀ ದಿನೇಶ್, ಬೆಂಗಳೂರು | ಶ್ರೀ ಜಯಾನಂದ ಎಂ, ಉಜಿರೆ




ಶ್ರೀ ವಿಜಯ ಕೊಡವೂರು, ಕೊಡವೂರು | ಶ್ರೀಮತಿ ಛಾಯಾ ಸಿ.ಎಸ್, ಉಜಿರೆ




ಶ್ರೀಮತಿ ಅನುರಾಧ ಶ್ರೀನಿವಾಸನ್, ಬೆಂಗಳೂರು | ಶ್ರೀಮತಿ ಕ್ಷಮಾ ಭಾರದ್ವಾಜ್




ಶ್ರೀ ರೋಷನ್ ಬೆಳ್ಮಣ್ | ಬೇಬಿ ಆದ್ಯ ಎ.




ಕೆ.ಎಸ್. ಮಂಜುನಾಥ್, ರಾಮನಗರ | ಶ್ರೀ ಕೆ. ಕೃಷ್ಣ ಭಟ್, ಕೊಕ್ಕಡ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಮಾನ್ಯರೇ,

ನಾನು 26/05/2023 ರಂದು ಮರದಿಂದ ಬಿದ್ದು ಅಪಘಾತದಲ್ಲಿ Spinal Cord Injury ಆಗಿ K.S ಹೆಗ್ಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು 4.5 ವರ್ಷಗಳ ಕಾಲ ಮನೆಯಲ್ಲೇ ಇದ್ದೆ. ನಂತರ ಸೇವಾಧಾಮಕ್ಕೆ ಬಂದು ಸೇರುತ್ತೇನೆ. ಇಲ್ಲಿ ಬಂದ ನಂತರ ಆರೋಗ್ಯದಲ್ಲಿ ಹಲವಾರು ಬದಲಾವಣೆಗಳನ್ನು ಕಂಡೆನು. ನನಗೆ T6/B ಸಂಪೂರ್ಣ ಅಪಘಾತವಾಗಿದ್ದು ಯಾವ ಕೆಲಸವು ನನಗೆ ಮಾಡಲು ಆಗುತ್ತಿರಲಿಲ್ಲ. ಆದರೆ ಸೇವಾಧಾಮಕ್ಕೆ ಬಂದ ನಂತರ ಈಗ ಹಲವಾರು ದಿನನಿತ್ಯದ ಕೆಲಸ ಅಂದರೆ ಊಟ ಅಥವಾ ಸ್ನಾನ ಎಲ್ಲವನ್ನು ಈಗ ನಾನೇ ಮಾಡಿಕೊಳ್ಳುತ್ತಿದ್ದೇನೆ. ಈಗ ನನಗೆ ಸೇವಾಧಾಮದಿಂದ ನನ್ನ ಜೀವನದಲ್ಲಿ ಬದಲಾವಣೆಗಳನ್ನು ಕಂಡುಕೊಂಡಿದ್ದೇನೆ. ಈಗ ಖುಷಿಯಾಗಿರುವೆ. ಸೇವಾಧಾಮದ ಎಲ್ಲ ಸದಸ್ಯರು, ಅಧ್ಯಕ್ಷರು ಮತ್ತು ಎಲ್ಲ ವರ್ಗದವರಿಗೂ ನನ್ನ ಧನ್ಯವಾದಗಳು.

ಧನ್ಯವಾದಗಳೊಂದಿಗೆ,

**ದತ್ತಾತ್ರೇಯ ನರಸಿಂಹ ಭಟ್**
ಶಿರಸಿ, ಉತ್ತರಕನ್ನಡ

*I choose not to place 'DIS', in my ability*

## ನಿಮಗಿದು ತಿಳಿದಿರಲಿ

### ಬೆನ್ನುಹುರಿ ಅಪಘಾತಕ್ಕೆ ಕಾರಣಗಳು

1. ರಸ್ತೆ ಅಪಘಾತಗಳು
2. ಎತ್ತರದಿಂದ ಬೀಳುವುದು
3. ಬೆನ್ನುಹುರಿಗೆ ವೈರಸ್ ದಾಳಿ
4. ಬೆನ್ನುಮೂಳೆ ಕ್ಷಯ (ಟಿ.ಬಿ.)
5. ರಕ್ತಗೆಡ್ಡೆ (ಟ್ಯೂಮರ್)
6. ಕ್ರೀಡೆಗಳು
7. ಸೋಂಕು (ವೈರಲ್, ಫಂಗಸ್, ಬ್ಯಾಕ್ಟೀರಿಯಲ್)
8. ಮಗುವಿನ ಹೆರಿಗೆಯ ಸಂದರ್ಭದಲ್ಲಿ
9. ಮದ್ಯಪಾನದಿಂದ

### ಬೆನ್ನುಹುರಿ ಅಪಘಾತದಿಂದ ಉಂಟಾಗುವ ಸಮಸ್ಯೆಗಳು

1. ಸ್ಪರ್ಶಜ್ಞಾನ, ಮಲ, ಮೂತ್ರ ನಿಯಂತ್ರಣ ಕಳೆದುಕೊಳ್ಳುವುದು
2. ಚಲನೆ, ಕೂರಲು ಮತ್ತು ನಿಲ್ಲಲು ಸಮತೋಲನ ಸಮಸ್ಯೆ
3. ಒತ್ತಡ ಅಥವಾ ಹಾಸಿಗೆಗಾಯದ ಸಮಸ್ಯೆ
4. ಮೂತ್ರನಾಳದ ಸೋಂಕು
5. ನರಗಳ ಸೆಳೆತ ಮತ್ತು ನಡುಕ
6. ಚರ್ಮದ ತೊಂದರೆಗಳು
7. ಕೌಟುಂಬಿಕ ಕಲಹಗಳು
8. ಸಾಮಾಜಿಕ, ಮಾನಸಿಕ ಮತ್ತು ಆರ್ಥಿಕ ಸಮಸ್ಯೆಗಳು

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನಿಗೆ

# ಉದ್ಯೋಗಕ್ಕೆ ಬೆನ್ನೆಲುಬಾದ ಹೈನುಗಾರಿಕೆ ಕೃಷಿ





**ಕಾರು ಡಿಕ್ಕಿಹೊಡೆದು ರಸ್ತೆ ಅಪಘಾತಕ್ಕೊಳಗಾಗಿ ಬೆನ್ನುಹುರಿ ಅಪಘಾತಕ್ಕೊಳಗಾದರು. ನಂತರ ಚಿಕಿತ್ಸೆಗಾಗಿ ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯಲ್ಲಿ 3 ತಿಂಗಳ ಕಾಲ ಚಿಕಿತ್ಸೆ ಪಡೆದರು. ಇಂತಹ ಸಮಯದಲ್ಲಿ ಅಕ್ಕತಂಗಿಯಂದಿರು, ಊರಿನವರ ಬೆಂಬಲ, ಪ್ರೋತ್ಸಾಹಗಳಿಂದ ಪರಿಸ್ಥಿತಿಯನ್ನು ಎದುರಿಸಲು ಸಹಕಾರಿಯಾಯಿತು. ಬೆನ್ನುಹುರಿ ಅಪಘಾತದ ನಂತರ ಒತ್ತಡಗಾಯದಂತಹ ದ್ವಿತೀಯಾಂತರ ಸಮಸ್ಯೆಗಳು ಇದ್ದರೂ 1 ವರ್ಷದ ಒಳಗೆ ಚೇತರಿಸಿಕೊಂಡರು. ಸೇವಾಧಾಮಕ್ಕೆ ಬಂದ ನಂತರ ವಾಕರ್ ಸಹಾಯದಿಂದ ಮೆಟ್ಟಿಲುಗಳಲ್ಲಿ ನಡೆಯಲು ಕಲಿಯುವುದರ ಜೊತೆಗೆ ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ತಾವೇ ಮಾಡುವಷ್ಟು ಸಬಲರಾದರು. ಈಗ ಹೈನುಗಾರಿಕೆ ಮಾಡಿ ಜೀವನ ಸಾಗಿಸುತ್ತಿದ್ದಾರೆ**

**' ಕೈ ಕೆಸರಾದರೆ ಬಾಯಿ ಮೊಸರು ಎಂಬಂತೆ ಕಷ್ಟಪಟ್ಟು ಹಗಲು–ರಾತ್ರಿ ದುಡಿಮೆ ಮಾಡಿ ಆಟೋ ಚಲಾಯಿಸಿ ಜೀವನ ಸಾಗಿಸುತ್ತಿದ್ದ ವ್ಯಕ್ತಿಯು ರಸ್ತೆ ಅಪಘಾತದಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ಕೊಪ್ಪದ ವಿಶ್ವನಾಥ ಗುಗ್ಗುಂಜೆ ಯಶೋಗಾಥೆ.**

ವಿಶ್ವನಾಥ ಗುಗ್ಗುಂಜಿ ಇವರು ಜೂನ್ 1, 1980 ರಲ್ಲಿ ಕೊಪ್ಪದಲ್ಲಿ ಜನಿಸಿದರು. ತಮ್ಮ ಎಸ್.ಎಸ್.ಎಲ್.ಸಿ. ಶಿಕ್ಷಣವನ್ನು ನಾರ್ವೆಯ ಸ್ವಯಂಪ್ರಕಾಶ ಸರಸ್ವತಿ ಪ್ರೌಢ ಶಾಲೆಯಲ್ಲಿ ಪೂರ್ಣಗೊಳಿಸಿದರು. ತದನಂತರ ಶಿಕ್ಷಣ ಮುಂದುವರೆಸಲು ಇಷ್ಟವಿಲ್ಲದೆ ಖಾಸಗಿ ಬಸ್ಸಿನಲ್ಲಿ ಕಂಡೆಕ್ಟರ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 8 ವರ್ಷಗಳ ಕಾಲ ಕಂಡೆಕ್ಟರ್ ಆಗಿ ದುಡಿದ ನಂತರ ಮನೆಗೆ ಬಂದು ತಮ್ಮದೇ ಆದ ಆಟೋ ರಿಕ್ಷ ಖರೀದಿಸಿ, ಆಟೋ ಚಾಲಕನಾಗಿ ವೃತ್ತಿಜೀವನ ಮುಂದುವರೆಸಿದರು.

ಹೀಗಿರುವಾಗ ತನ್ನ 37ನೇ ವಯಸ್ಸಿನಲ್ಲಿ 2017ರ ಜನವರಿ 3 ರಂದು ಅಪರಾಹ್ನ 3.00 ಗಂಟೆಯ ಸುಮಾರಿಗೆ ಉತ್ತಮೇಶ್ವರದಿಂದ ಕೊಪ್ಪಕ್ಕೆ ಬರುತ್ತಿದ್ದಾಗ ದಾರಿಮಧ್ಯದಲ್ಲಿ ಕಾರು ಡಿಕ್ಕಿಹೊಡೆದು ರಸ್ತೆ ಅಪಘಾತಕ್ಕೊಳಗಾಗಿ ಬೆನ್ನುಹುರಿ ಅಪಘಾತಕ್ಕೊಳಗಾದರು. ನಂತರ ಚಿಕಿತ್ಸೆಗಾಗಿ ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯಲ್ಲಿ 3 ತಿಂಗಳ ಕಾಲ ಚಿಕಿತ್ಸೆಪಡೆದರು. ಇಂತಹ ಸಮಯದಲ್ಲಿ ಅಕ್ಕತಂಗಿಯಂದಿರು, ಊರಿನವರ ಬೆಂಬಲ, ಪ್ರೋತ್ಸಾಹಗಳಿಂದ ಪರಿಸ್ಥಿತಿಯನ್ನು ಎದುರಿಸಲು ಸಹಕಾರಿಯಾಯಿತು. ಬೆನ್ನುಹುರಿ ಅಪಘಾತದ ನಂತರ ಒತ್ತಡಗಾಯದಂತಹ ದ್ವಿತೀಯಾಂತರ ಸಮಸ್ಯೆಗಳು ಇದ್ದರೂ 1 ವರ್ಷದ ಒಳಗೆ ಚೇತರಿಸಿಕೊಂಡರು. ನಂತರ ಹೆಬ್ರಿಗೆ ಬಂದು ಕೊಪ್ಪದ ಚೆನ್ನಪ್ಪ ಅವರಿಂದ ಫಿಸಿಯೋಥೆರಪಿ ಚಿಕಿತ್ಸೆಯನ್ನು ಪಡೆದುಕೊಂಡರು. ಇಲ್ಲಿ ಚಿಕಿತ್ಸೆ ಪಡೆಯುತಿದ್ದ ಸಂಧರ್ಭದಲ್ಲಿ ಸೇವಾಭಾರತಿ ಸೇವಾಧಾಮದ ಬಗ್ಗೆ ತಿಳಿದು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರೊಂದಿಗೆ ಮಾತನಾಡಿ ಪುನಶ್ಚೇತನಕ್ಕೆಂದು 2020ರಲ್ಲಿ ಸೇವಾಧಾಮಕ್ಕೆ ಬಂದರು.

ಸೇವಾಧಾಮಕ್ಕೆ ಬಂದ ನಂತರ ವಾಕರ್ ಸಹಾಯದಿಂದ ಮೆಟ್ಟಿಲುಗಳಲ್ಲಿ ನಡೆಯಲು ಕಲಿಯುವುದರ ಜೊತೆಗೆ ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ತಾವೇ ಮಾಡುವಷ್ಟು ಸಬಲರಾದರು. ಇವರು ಸೇವಾಭಾರತಿಯಿಂದ ಜೀವನೋಪಾಯ ಯೋಜನೆಯಡಿಯಲ್ಲಿ ಜೇನುಸಾಕಣೆಗೆ ರೂ. 10,000 ಹಾಗೂ 2 ಜೇನುಪೆಟ್ಟಿಗೆಯನ್ನು ಪಡೆದು, ಹಸುಸಾಕಣೆಗೆ ರೂ.10,000 ಧನಸಹಾಯವನ್ನು ಪಡೆದಿರುತ್ತಾರೆ. ಪ್ರಸ್ತುತ ಇವರು ಹಸುಗಳನ್ನು ಸಾಕುತ್ತಿದ್ದು ಹಾಲನ್ನು ಮಾರಾಟ ಮಾಡುತ್ತಿದ್ದಾರೆ. ಹೀಗೆ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಯ ಜೀವನಕ್ಕೆ ಬೆನ್ನೆಲುಬಾದ ಹೈನುಗಾರಿಕೆ ಎಲ್ಲರಿಗೂ ಮಾದರಿಯಾಗುವಂತಹುದು.